ದಿನಾಂಕಃ **17–02–2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಃ ದೂರುದಾರರ ಪರ ವಕೀಲರಿಂದ,**

1) ಎರಡು ಅಂಚೆ ರಶೀದಿಗಳನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಗಳನ್ನು ನಿಶಾನೆ.ಪಿ–6 ಮತ್ತು 7 ಎಂದು ಗುರುತಿಸಲಾಯಿತು.

2) ಅಂಚೆ ಸ್ವೀಕೃತಿಯನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು ನಿಶಾನೆ.ಪಿ–8 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ

1) ಆರೋಪಿಯ ಎರಡು ವಿಳಾಸಕ್ಕೆ ನೋಟಿಸ್ ನೀಡಿರುತ್ತೇನೆ. ತಿಳುವಳಿಕೆ ಪತ್ರ ನೀಡಿದ ದಿನಾಂಕಗಳು ನೆನಪಿರುವುದಿಲ್ಲ. ಆರೋಪಿಯ ಜವರೇಗೌಡನ ಕೊಪ್ಪಲು ವಿಳಾಸಕ್ಕೂ ಸಹ ತಿಳುವಳಿಕೆ ಪತ್ರ ನೀಡಿರುತ್ತೇನೆ. ಚಂದಗಾಲು ಗ್ರಾಮ ವಿಳಾಸಕ್ಕೆ ನೀಡಿದ ನೋಟಿಸು ಜಾರಿ ಆಗಿರುತ್ತದೆ. ನಿಶಾನೆ ಪಿ–1 ರಲ್ಲಿರುವ ಸಹಿ ಮತ್ತು ನಿಶಾನೆ ಪಿ–8 ರಲ್ಲಿರುವ ಸಹಿಗಳನ್ನು ಗುರುತಿಸಲು ಆಗುವುದಿಲ್ಲ. ನಿಶಾನೆ ಪಿ–8 ರಲ್ಲಿರುವ ಸಹಿ ಆರೋಪಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ.ಪಿ–8 ಅಂಚೆ ಸ್ವೀಕೃತಿಯಲ್ಲಿರುವ ದಿನಾಂಕವನ್ನು ತಿದ್ದುಪಡಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಶಾನೆ.ಪಿ–8 ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ವಿಳಾಸವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.